ಕಾರಸ್ಥಾನ, ಕರಾಮತ್ತುಗಳು ನಡೆದಿರುತ್ತವೆ. ಆಕ್ರಮಣ ಎಷ್ಟೆಲ್ಲ ರೀತಿಯಲ್ಲಿ ನಡೆದಿರುತ್ತದೆ. ತನಗೆ ತಿಳಿದಿರುವುದೇ ಇಲ್ಲ. ಮಂದಿ ಛೀ, ಥೂ ಅಂದ ಮೇಲೆ ಮಾವ ಹೋಟೆಲ್ ಕಡೆ ಹೋಗುವುದನ್ನು ಬಿಟ್ಟನಂತೆ.

ಈಗ ಅಚಾನಕ್ ಆಗಿ ಸುಶೀಲಾ ಸಿಕ್ಕಿದ್ದಕ್ಕೆ ನಾಗರಾಜನ ಹಳವಂಡವೆಲ್ಲ ಒಮ್ಮೆಲೆ ಕರಗಿದಂತಾಯಿತು. 'ದೀಪಾ ಫೋನ್ ಮಾಡಿದ್ಲು...' ಸುಶೀಲಾ ಹೇಳಿದಾಗ ಅವನಿಗೆ ಶಾಕ್ ಆಯಿತು. 'ಆಕಿ ನನಗ ಮಾಡೇ ಇಲ್ಲ. ನಾ ಎಷ್ಟ ಸಲ ಕಾಲ್ ಮಾಡಿದರೂ ಎತ್ತಲಿಲ್ಲ.' ಇವನು ಉದ್ಗರಿಸಿದ. ಸುಶೀಲಾ ಅಂದಳು: 'ನಿನಗ ಮಾಡಿದ್ರ ಏನ ಉಪಯೋಗೈತಿ ಹೇಳು? ನಿನ್ನ ಹೆಂಡತಿ ನನಗ ಎಲ್ಲಾ ಹೇಳಿದ್ಲು. ನಿನ್ನೆ ರಾತ್ರೀನ ಬಂದಿಯಂತ. ಊರಾಗ ಇರಬೇಕಂತ ಹುಡುಕಿಸಿದೆ. ಅಂವಸರಲೆ ಹೊಂಟೇದಿ. ಏನೂ ತಿಂದಿಲ್ಲ, ಹೌದಲ್ಲೋ?' ಮಸಾಲೆ ದೋಸೆ ತರಿಸಿದಳು. 'ರೊಕ್ಕ ಅದಾವಿಲ್ಲೋ. ನಿಮ್ಮ ಸ್ವಾದರಮಾಂವಗ ಕೊಡಲಿಕ್ಕೆ ಮಾತ್ರ ನಿನ್ನ ಹತ್ರ ದುಡ್ಡು ಇರ್ತಾವು.' ಎಲ್ಲರೆದುರೇ ಅವನ ಕಿವಿ ಹಿಂಡಿದಳು. ಇಬ್ಬರೂ ಮನಸಾರೆ ನಕ್ಕರು. ವೇಟರ್‌ನಿಗೂ ನಗು ಬಂತು. ಇವರು ಹೇಳಿದ್ದನ್ನು ಆತ ಆಗಿಂದಾಗ ತಂದು ಇಡತೊಡಗಿದ. ಚಹಾ ಗುಟುಕರಿಸುತ್ತ ಆಕೆ ಅಂದಳು: 'ನಡೀ, ಊರಿಗೆ ಹೋಗೋಣು. ಶಂಕರಪ್ಪ ನಿನ್ನ ಮುಂದ ಏನು ಮಾತಾಡ್ಯಾನಲ್ಲ, ಅದನ್ನೆಲ್ಲ ಆಂವ ನನ್ನ ಮುಂದ ಹೇಳಲಿ...' ಅವಳು ಮಾವನಿಗೆ ಸವಾಲು ಹಾಕುವವಳಂತೆ ಕಂಡಳು. ನಾಗರಾಜನಿಗೆ ಒಂದು ಕ್ಷಣ ಖುಷಿ ಎನಿಸಿತು. ಮರುಕ್ಷಣ ಸಪ್ಪಗಾದ. ಏನು ಮಾಡುವುದು? ಸುಶೀಲಾಳ ಜೊತೆ ಮರಳಿ ಹಳ್ಳಿಗೆ ಹೋಗಲೆ? ಇಲ್ಲಾ ಬೆಂಗಳೂರಿನ ಬಸ್ಸು ಹತ್ತಲೆ? ನಾಗರಾಜನಿಗೆ ಮತ್ತೊಂದು ಇಕ್ಕಟ್ಟಿನಲ್ಲಿ ಸಿಲುಕಿದಂತಾಯಿತು. ಅದೇನು ದೊಡ್ಡ ವಿಷಯವಲ್ಲ, ತಾನು ಬಗೆಹರಿಸಿಕೊಳ್ಳುತ್ತೇನೆ ಎಂದು ಹೇಳಿ ಇವಳಿಂದ ನುಣುಚಿಕೊಳ್ಳಲೆ? ಉತ್ತರಿಸಲು ಎಷ್ಟೊಂದು ತಡ ಮಾಡುತ್ತಾನೆಂದು ಸುಶೀಲಾ ಅವನ ಮುಖ ನೋಡಿದಳು.

## ಬಸು ಬೇವಿನಗಿಡದ

ಲೇಖಕರು ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುನವಳ್ಳಿಯವರು. 'ತಾಯವ್ವ', 'ಬಾಳೆಯ ಕಂಬ', 'ಹೊಡಿ ಚಕ್ಕಡಿ' ಹಾಗೂ 'ಉಗುಳುಬುಟ್ಟಿ' – ಅವರ ಕಥಾ ಸಂಗ್ರಹಗಳಾಗಿವೆ. 'ಸ್ವಾತಂತ್ರ್ಯ ಚಳವಳಿ ಹಾಗೂ ಭಾರತೀಯ ಮುಸ್ಲಿಮರು', 'ಸಮಕಾಲೀನ ಭಾರತೀಯ ಸಣ್ಣಕತೆಗಳು', 'ಕಮಲಾದೇವಿ ಚಟ್ಟೋಪಾಧ್ಯೋಯ', 'ಹಸಿರು ಕಾಡಿನ ಗೆಳೆಯರು', 'ಅಪರಾಜಿತೆ ಸಾಮರಸೆಟ್ ಮಾಮ್ ಕತೆಗಳು' ಅವರ ಅನುವಾದ ಪುಸ್ತಕಗಳು. ಪ್ರಸ್ತುತ ಧಾರವಾಡ ಆಕಾಶವಾಣಿಯಲ್ಲಿ ಕಾರ್ಯಕ್ರಮ ಅಧಿಕಾರಿಯಾಗಿದ್ದಾರೆ.